ಸರಿದಾರಿಗೆ ತರಬೇಕೆಂದುಕೊಂಡು ಒಂದಿನ ಮುಂಜಾನೆಯೇ ಕಾಲೋನಿಗೆ ಪಾದಬೆಳಸಿದರು.

ತಾನು ಬಂದಿರುವುದನ್ನು ಗಮನಿಸಿಯೂ ಹಟ್ಟಿ ತಾನಾಯ್ತು ತನ್ನ ಕೆಲಸವಾಯಿತೆಂದು ತಲ್ಲೀನತೆ ಪ್ರದರ್ಶಿಸಲು ಮಂಜೇಗೌಡರಿಗೆ ರೇಗಿತು. 'ಚನ್ನ, ಕರಿಯ, ಮಾದ ಬರ್ರುಲ್ಲ ಇಲ್ಲಿ' ಎಂದು ಅಬ್ಬರಿಸಿದರು. ಹಟ್ಟಿ ನಡುಗಿದಂತಾಗಿ ಒಬ್ಬೊಬ್ಬರೆ ಬಂದು ಸುತ್ತಲೂ ನೆರೆದರು. ಹಿರಿಯರ ಹಿಂದೆಯೇ ಎಲ್ಲೆಲ್ಲೋ ಹೋಗಿದ್ದ ಯುವಕರು ಬಿರುಬಿರನೆ ಬಗೆ ಮಾಡಿಕೊಂಡು ಬಂದು ಎದುರಿಗೆ ನಿಂತರು. 'ಏನಿದು ನೀವು ಮಾಡ್ತಿರದು ಸರಿನ? ನಾವೆಲ್ಲ ಅಷ್ಟು ಕಷ್ಟ ಪಟ್ಟು ಆಯಮ್ಮನಿಗೆ ಜಾತ್ರೆ ಮಾಡ್ಸಿ ಹೋಮ ಸುಟ್ರೆ, ನೀವು ಬಿರಿಯಾನಿ ಮಾಡ್ಕೆಂಡು ತಿಂದಿದಿರ, ನಾವು ಮಾಡಿದ್ದೆಲ್ಲ ನೀರಿಗೆ ಹಾಕಿದಂಗೆ ಮಾಡಿದಿರ, ನಿಮ್ದು ಅತಿಯಾಯ್ತು' ಎಂದರು. ಹಟ್ಟಿಯ ಹಿರಿಯ ತಲೆ ಚನ್ನ, 'ಇಲ್ಲ ಕಣ್ ಬುದ್ಧಿ, ನಾವು ಅಂತದ್ಕೆಲ್ಲ ಹೋಗಲ್ಲ, ಅಂಗೇನಾರ ಮಾಡಿರೆ ಆನಮ್ಮವ್ವ ಬಿಡ್ತಳ' ಎಂದು ಎರಡೂ ಕೈ ಜೋಡಿಸಿ ಅಂಗಲಾಚತೊಡಗಿದರೆ, ಹಿಂದೆಯೇ ಇದ್ದ ಪ್ರಶಾಂತ, 'ಹೂ ಕಣ್ರೆ ನಾವು ಮಾಡ್ಕೆಂಡು ತಿಂದಿದಿವಿ, ನಿಮ್ದೇನೀಗ, ನಮ್ಮೊಟ್ಟೆ ನಮ್ಮ ಬಾಯಿ' ಅಂದ. 'ಲೆ ಲೆ ದಾನಪ್ಪನ ಹುಡ್ಗ ನಿಂದು ಜಾಸ್ತಿ ಆತು, ಹಟ್ಟಿ ಕೆಡಕೆ ನೀನೆ ಕಾರ್ಣ' ಎಂದು ಮಂಜೇಗೌಡರ ಜೊತೆ ಬಂದಿದ್ದ ಪಟೇಲ್ರು ಪರಮೇಶಪ್ಪ ಕಣ್ಣು ದಪ್ಪಗೆ ಬಿಡಲಾಗಿ, ಅಲ್ಲೆ ಇದ್ದ ಮಲ್ಲಿ, 'ಆವತ್ತ ಕಟಿಂಗ್ ಮಾಡ್ಸಕೆ ಬಂದ್ರೆ, ಹಟ್ಟೀರಿಗೆ ಮಾಡಕೂಡ್ದು ಅಂದ್ರಿ, ಹೋಟ್ಲಲ್ಲಿ ತಾಯ್ಮುದ್ದಜ್ಜಿ ನಮಿಗೆ ಅಂತ ಬೇರೆ ಕಪ್ ಮಡ್ಗೈತೆ, ಯಾಕ್ರಿ ನೀವು ಹೇಳಿದಂಗೆ ನಾವು ಕೇಳ್ಬೇಕು' ಎಂದು ಕೀರಲು ದನಿಯಲ್ಲಿ ದುಮುಗುಟ್ಟಿದ. 'ಹೊ ಹೊ ಇದುನ್ನೆಲ್ಲ ಕೇಳಮಟ್ಟುಕ್ಕೆ ಬೆಳುದು ಬಿಟ್ರ ನೀವು' ಎಂದು ಮಂಜೇಗೌಡರು ಹಲ್ಲಲ್ಲು ಕಡಿಯಲಾಗಿ, 'ಇನ್ನೂ ಹಾಲು ಕುಡಿಯೋ ಮಗು ಅದ್ಕೇನ್ರಿ ಗೊತ್ತು ನಿಮ್ಮ ಕಟ್ಟು ಕಟ್ಟಳೆ ಎಲ್ಲ, ಆ ಮಗಿಗೆ ದಂಡ ಹಾಕಕೆ ಓಡಾಡ್ತಿರಲ್ಲ, ನೀವೇನು ಮನುಷ್ಯರ? ನಮ್ಮುನ್ನ ಮನುಷ್ಯರಾಗಿ ನೋಡದ ನೀವು, ನಿಮ್ಮ ದೇವ್ರು ಯಾವ್ದು ಬ್ಯಾಡ ನಮ್ಗೆ, ನಾವು ಏನಾರ ತಿನ್ಕಂತಿವಿ, ಉಣ್ಕಂತಿವಿ ಕೇಳಕೆ ನೀವ್ಯಾರು, ಹೋಗ್ತಾ ಇರಿ' ಸೀರಿಯಸ್ಸಾಗಿ ತಾನು ಕಲಿತದ್ದನ್ನೆಲ್ಲ ಪ್ರದರ್ಶಿಸುವ ಅವಕಾಶ ಪಡೆದ ಪ್ರಶಾಂತ. ಅದೇ ಸಮಯಕ್ಕೆ ಪ್ರೇಯರ್ ನಡೆಸಿಕೊಡಲೆಂದು ರಾತ್ರಿ ಬಂದಿದ್ದ ಹ್ಯಾರಿ ದಂಪತಿ ಸಮಯ ಮೀರಿದ್ದರಿಂದ ರಂಗನ ಮನೆಯಲ್ಲೆ ತಂಗಿದ್ದು, ಬೆಳಗ್ಗೆ ನೌಕರಿ ನಿಮಿತ್ತ ಹೊರಟು ಆಚೆ ಬಂದರು. ಇವರನ್ನು ನೋಡಿದ ಮಂಜೇಗೌಡರು, 'ಹಟ್ಟಿರು ಇಷ್ಟೆಲ್ಲ ಹೆಚ್ಕೆಣಕೆ ಯಾರು ಕಾರ್ಣ ಅಂತ ಗೊತ್ತೈತೆ, ಹಟ್ಟಿರ್ನ ಅಂದು ಏನ್ ಪ್ರಯೋಜನ, ಇಕ್ಕತಕೆ ಇಕ್ಕಿರೆ ತಗ್ಗತಕೆ ತಗ್ಗುತ್ತೆ' ಎಂದು ವಕ್ರವಾಗಿ ಅಂದರು. ಹ್ಯಾರಿ ದಂಪತಿ ಹೆಲ್ಮೆಟ್ ಹಾಕಿದ್ದರಿಂದ ಕೇಳಿಸದವರಂತೆ ಹೋಗೇ ಬಿಟ್ಟರು.

ಅವರು ಹೋದ ಅನಂತರ ಏನೋ ಯೋಚಿಸಿಸುತ್ತ ನಿಂತಿದ್ದ ಮಂಜೇಗೌಡರು ಅಲ್ಲೆ ರಂಗನ ಸೇವಾಕೇಂದ್ರದ ಚಪ್ಪಡಿ ಕಲ್ಲಿನ ಮೇಲೆ ಕೂತು, 'ಅಂಗಲ್ಲ ಕಂಣ್ರುಲ, ಬರ್ರುಲ್ಲ ಇಲ್ಲಿ ನಾವೆಲ್ಲ ಹೆಂಗಿದ್ದರು, ನಮ್ಮಪ್ಪುನ ಕಾಲ್ದಿಂದಲು ಹಟ್ಟಿರ್ನ ಯಂಗೆ ನೋಡ್ಕೆಂಡು ಬಂದಿದಿವಿ, ನಮ್ಮವ್ವ ಕೊಡ್ಬೇಕು ನಿಮ್ಮನೆ ಒಲೆ ಬೇಯ್ಬೇಕು, ಇಂಗೆ ಕಾಪಾಡ್ಕೆಂಡು ಬಂದಿದಿವಿ, ಅಂಗಿದ್ದರು ಇವತ್ತು ನಮ್ಮ ದೇವ್ರು ಬ್ಯಾಡ, ನಾವು ಬ್ಯಾಡ ಅಂದ್ರೆ ದೇವ್ರು ಮೆಚ್ತನ, ಲೇ ಕರ್ಯ, ಅವೇನ ಈಗ್ಲ ಹುಡುಗ್ರು ಅವುಕ್ಕೇನು ಗೊತ್ತಿರಲ್ಲ, ನೀವಾರ ಹೇಳದಲ್ವೇನ್ರಲ' ಹೀಗೆ ವರಸೆ ಬದಲಾಯಿಸಿದರು. 'ಹುಕಣ್ ಬುದ್ಧಿ ಇಲ್ಲುಡ್ತೆಲ್ಲ ಆಡ್ಬಾರ್ದು ಆವತ್ತಿನ ಪರಿಸ್ಥಿತಿ ಅಂಗೆ ಇತ್ತು, ನಾನು ಎಷ್ಟೊ ಹೇಳ್ತಿನಿ ಈ ನನ್ನೆತ್ತಿವು ಕೇಳಲ್ಲ, ಆ ದಾನಪ್ಪನ ಹುಡುಗ್ನಿಂದಲೆ ಇಂಗೆಲ್ಲ ಕೆಟ್ಟಿರದು' ಎಂದು ಕರಿಯ ನಿಷ್ಠೆ ತೋರಿದ. ಅಲ್ಲೇ ಇದ್ದ ಅದೇ ಕರ್ಯನ ಮಗ ಸೂರಿ, 'ಹೊ ಹೊ ಹೊ ನೀವೇನ್ ಸುಮ್ನೆ ಕೊಟ್ಟಿಲ್ಲ ಹೇಳ್ರಿ ಗೌಡ್ರೆ ಆರುಕ್ಕೆ ಮೂರ್ರಂಗೆ ನಮ್ಮವ ಹೊಲ ಬರಿಸ್ಕೆಂಡು ಕೊಟ್ಟಿದಿರ, ಈಗ ಕಾನೂನು ಐತೆ ನಮ್ಮವರನ್ನೆಲ್ಲಾ ಯಾರ್ಯಾರು ತಗಂಡವ್ರೊ ಎಲ್ಲ ವಾಪಸ್ ಕೊಡ್ಬೇಕಾಗುತ್ತೆ' ಎಂದು ಭಾಳ ದಿನದಿಂದ ಕೊರಿತಿದ್ದ